14 ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆಯು ಒದಗಿಸಿರುವ ಸೌಲಭ್ಯಗಳ ಬಗ್ಗೆ

ಶ್ರೀಮತಿ ಟಿ ಭಾಗೀರಥಿ (ಕೊಟ್ಟೂರು) ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತಿನ ಪ್ರಶ್ನೆ ಸಂಖ್ಯೆ 862 ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮೂಲ ಭೂತ ಸೌಲಭ್ಯ ಅಭಿವೃದ್ಧಿ ಇಲಾಖೆಯು ಬಹಳಷ್ಟು ಯೋಜನೆ ಸೌಲಭ್ಯಗಳನ್ನು ಒದಗಿಸಿದೆ ಅವುಗಳು ಈ ರೀತಿ ಇವೆ ಗುಲ್ಬರ್ಗಾ ವಿಮಾನ ನಿಲ್ದಾಣ ಅಭಿವೃದ್ಧಿ ಹಂಪಿ ಹತ್ತಿರ ವಿಮಾನ ನಿಲ್ದಾಣ ಅಭಿವೃದ್ಧಿ ಕೊಟ್ಟೂರು ಹರಿಹರ ಹೊಸ ರೈಲ್ವೆ ಹಿಂದಿನ ಎರಡು ವರ್ಷಗಳಲ್ಲಿ ಈ ಯೋಜನೆ ಅತ್ಯಂತ ಶೀಘ್ರವಾಗಿ, ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿತ್ತು ಅನೇಕ ಕಷ್ಟಗಳ ನಡುವೆ ಇವತ್ತು ಭೂ ಸ್ವಾಧೀನ ಮಾಡಿಕೊಳ್ಳಬೇಕಾಗಿತ್ತು ಅಂತಹ ಸಂದರ್ಭದಲ್ಲಿ ಅನೇಕ ರೈತರು ಅಡೆತಡೆಗಳನ್ನು ಮಾಡಿದ್ದಾಗ್ಯೂ ಕೂಡ ನಾನು ಆ ರೈತರನ್ನೆಲ್ಲಾ ಕೂಡಿಸಿಕೊಂಡು, ಇಲ್ಲ ದಯವಿಟ್ಟು ಇದಕ್ಕೆ ಯಾರೂ ಅಡ್ಡಿ ಮಾಡಬೇಡಿ ಅತಿ ಶೀಘ್ರವಾಗಿ ಕೆಲಸವನ್ನು ಮಾಡೋಣ ಎನ್ನತಕ್ಕ ವಿಚಾರವನ್ನು ಹೇಳಿದ್ದರಿಂದ ಇವತ್ತಿನವರೆಗೆ ಯಾವುದೇ ರೀತಿ ಅಡೆ ತಡೆ ಇಲ್ಲದೇ ಕಾರ್ಯಕ್ರಮ ಸಾಗುತ್ತಿದೆ ಆದರೆ ಈ ವರ್ಷ ಕೊಟ್ಟೂರು–ಹರಿಹರ ಹೊಸ ರೈಲ್ವೆಗೆ ಕೇವಲ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿರತಕ್ಕದ್ದು ಅದರಲ್ಲಿ ಕೇವಲ ನನ್ನ ರೈಲ್ವೆ ಯೋಜನೆಗೆ 30 ಲಕ್ಷ ರೂಪಾಯಿಗಳು ಮಾತ್ರ ಸಿಗುತ್ತಿದೆ 121 ಕೋಟಿ ರೂಪಾಯಿ ಪ್ರಾಜೆಕ್ಟ್ ಕಾರ್ಯಕ್ರಮ ಯಾವಾಗ ಮುಗಿಯಬೇಕು ಎನ್ನತಕ್ಕದ್ದು ನನಗೆ ಈಗ ಚಿಂತನೆ ಆಗಿದೆ ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮಂತ್ರಿಗಳೂ ಹಣಕಾಸು ಸಚಿವರು ಇಲ್ಲೇ ಇದ್ದಾರೆ ಈ ರೈಲ್ವೆ ಯೋಜನೆಗೆ ಹೆಚ್ಚು ಹಣವನ್ನು ಕೊಟ್ಟು ಅತೀ ಶೀಘ್ರದಲ್ಲಿ ಕಾರ್ಯಕ್ರಮವನ್ನು ಮುಗಿಸಿ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸನ್ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಆ ರೈಲ್ವೆ ಯೋಜನೆ ಇದೆಯಲ್ಲಾ, ಅದನ್ನು ಪರಿಶೀಲನೆ ಮಾಡಿ ಸರ್ಕಾರದಿಂದ ಎಷ್ಟು ಹಣ ಕೊಡಬೇಕು ಅದನ್ನು ನೋಡಿ ಆ ಹಣ ಒದಗಿಸತಕ್ಕಂಥ ಪ್ರಯತ್ನ ಮಾಡುತ್ತೇವೆ

ಶ್ರೀ ಸಿ ಸಿ ಪಾಟೀಲ್ ಸನ್ಮಾನ್ಯ ಅಧ್ಯಕ್ಷರೆ, ಸಿ ಸಿ ಪಾಟೀಲ್ ಮತ್ತು ಬಿ ಸಿ ಪಾಟೀಲ್ ಎಂಬ ಹೆಸರು ಸ್ವಲ್ಪ ಕನ್‌ಫ್ಯೂಸ್ ಆಗಿದೆ.

15 ವಿಷಯ ನರಗುಂದ ವಿಧಾನಸಭಾ ಕ್ಷೇತ್ರದ ರೋಣ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಕಾಡು ದನಗಳ ಹಾವಳಿ

ಶ್ರೀ ಸಿ ಸಿ ಪಾಟೀಲ್ (ನರಗುಂದ) ಮಾನ್ಯ ಅಧ್ಯಕ್ಷರೆ, ನರಗುಂದ ವಿಧಾನಸಭಾ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ರೋಣ ಹಳ್ಳಿಗಳಲ್ಲಿ ಅಸುಟಿ ಕರ್ಮಡಿ,